**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.278/2021

**PW**. 13

**CW**. 33

**ಸಾಕ್ಷಿಯ ಹೆಸರು –ಡಾ. ಶಿವಪ್ರಕಾಶ ಹೆಚ್ ಎಂ**

**ತಂದೆಯ ಹೆಸರು –ಮಹದೇವಯ್ಯ**

**ವಯಸ್ಸು –48 ವರ್ಷಗಳು** ದಿನಾಂಕ 04–09–2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವೈದ್ಯಾಧಿಕಾರಿಗಳು , ಕೆ ಆರ್ ಪೇಟೆ ಸಾರ್ವಜನಿಕ ಆಸ್ಪತ್ರೆ, ಕೆ ಆರ್ ಪೇಟೆ**

**ವಾಸಸ್ಥಳ –ಕೆ ಆರ್ ಪೇಟೆ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ಜುಲೈ 2015 ರಿಂದ ಜುಲೈ 2025 ರವರೆಗೆ ಪಿರಿಯಾಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಿರಿಯ ತಜ್ಞ ವೈದ್ಯರಾಗಿ ಸೇವೆ ಸಲ್ಲಿಸಿದ್ದೇನೆ.

ದಿಃ 12–11–2019 ರಂದು ರಾತ್ರಿ 9.50 ಗಂಟೆ ಸಮಯಕ್ಕೆ ನಾನು ಆಸ್ಪತ್ರೆಯ ಕರ್ತವ್ಯದಲ್ಲಿರುವಾಗ ಹಲ್ಲೆಯ ಹಿನ್ನೆಲೆಯಲ್ಲಿ ಚಾಸಾ–1 ರವರು ನಮ್ಮ ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷೆ ಮಾಡಲಾಗಿ ಅವರಿಗೆ ಈ ಕೆಳಕಂಡ ಗಾಯ ಕಂಡುಬಂದಿರುತ್ತವೆ.

1. ಬಲ ಮೊಣಕೈ ಮತ್ತು ಬೆನ್ನಿನ ಕೆಳಭಾಗದಲ್ಲಿ ನೋವು ಕಂಡುಬಂದಿರುತ್ತದೆ.

ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–14 ಎಂದು ಸಾಕ್ಷಿಯ ಸಹಿಯನ್ನು ನಿಪಿ–14(ಎ) ಎಂದು ಗುರುತಿಸಲಾಯಿತು. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯವು ಸಾದಾ ಸ್ವರೂಪದ ಗಾಯವಾಗಿರುತ್ತದೆ.

ಅದೇ ದಿನ ರಾತ್ರಿ 8.50 ಗಂಟೆಗೆ ಅದೇ ಹಲ್ಲೆಯ ಹಿನ್ನೆಲೆಯಲ್ಲಿ ಗಾಯಾಳು ಜವರಯ್ಯ ಚಾಸಾ–2 ರವರು ನಮ್ಮ ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷೆ ಮಾಡಲಾಗಿ ಅವರಿಗೆ ಈ ಕೆಳಕಂಡ ಗಾಯ ಕಂಡುಬಂದಿರುತ್ತವೆ.

1. ಹಣೆಯ ಮೇಲೆ 10 x 2 ಸೆಂ ಮೀ ಅಳತೆಯ ಹರಿದ ಗಾಯ

2. ಬಲ ಮೊಣಕೈಯಲ್ಲಿ ತರಚಿದ ಗಾಯ

ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಕೆ ಆರ್ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಆದರೆ ಸದರಿ ಗಾಯಾಳು ಬೃಂದಾವನ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪಡೆದಿದ್ದು, ಅವರು ಎರಡು ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತಾರೆ. ಬೃಂದಾವನ ಆಸ್ಪತ್ರೆಯಿಂದ ಬಂದ ರೆಫರಲ್ ವರದಿಯ ಮೇರೆಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–15 ಎಂದು ಸಾಕ್ಷಿಯ ಸಹಿಯನ್ನು ನಿಪಿ–15(ಎ) ಎಂದು ಗುರುತಿಸಲಾಯಿತು. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯವು ಸಾದಾ ಸ್ವರೂಪದ ಗಾಯವಾಗಿರುತ್ತದೆ. ಸದರಿ ರೆಫರಲ್ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–16 ಎಂದು ಗುರುತಿಸಲಾಯಿತು.

ಅದೇ ದಿನ ರಾತ್ರಿ 8.40 ಗಂಟೆಗೆ ಅದೇ ಹಲ್ಲೆಯ ಹಿನ್ನೆಲೆಯಲ್ಲಿ ಗಾಯಾಳು ನಟರಾಜು ಚಾಸಾ–3 ರವರು ನಮ್ಮ ಆಸ್ಪತ್ರೆಗೆ ಬಂದಿದ್ದು, ಅವರನ್ನು ಪರೀಕ್ಷೆ ಮಾಡಲಾಗಿ ಅವರಿಗೆ ಈ ಕೆಳಕಂಡ ಗಾಯ ಕಂಡುಬಂದಿರುತ್ತವೆ.

1. ತಲೆಯ ಬಲಭಾಗದಲ್ಲಿ ಮೇಲೆ 8 x 2 ಸೆಂ ಮೀ ಅಳತೆಯ ಮೂಳೆ ಆಳದವರೆಗೆ ಕತ್ತರಿಸಿದ ಗಾಯ

ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಕೆ ಆರ್ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಆದರೆ ಸದರಿ ಗಾಯಾಳು ಬೃಂದಾವನ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಪಡೆದಿದ್ದು, ಅವರು 1 ತಿಂಗಳು 3 ದಿನ

ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತಾರೆ. ಬೃಂದಾವನ ಆಸ್ಪತ್ರೆಯಿಂದ ಬಂದ ರೆಫರಲ್ ವರದಿಯ ಮೇರೆಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–17 ಎಂದು ಸಾಕ್ಷಿಯ ಸಹಿಯನ್ನು ನಿಪಿ–17(ಎ) ಎಂದು ಗುರುತಿಸಲಾಯಿತು. ನನ್ನ ಅಭಿಪ್ರಾಯದಲ್ಲಿ ಸದರಿ ಗಾಯವು ತೀವ್ರ ಸ್ವರೂಪದ ಗಾಯವಾಗಿರುತ್ತದೆ. ಸದರಿ ರೆಫರಲ್ ವರದಿಯನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ–18 ಎಂದು ಗುರುತಿಸಲಾಯಿತು.

ಮು.ಮಾ–1 ರಿಂದ 3 ರ ಆಯುಧಗಳಿಂದ ಹಲ್ಲೆ ಮಾಡಿದರೆ ನಿಪಿ–14, 15 ಮತ್ತು 17 ರಲ್ಲಿ ನಮೂದು ಮಾಡಿರುವಾಗ ಗಾಯಗಳು ಆಗಬಹುದು.

ದಿಃ 24–07–2020 ರಂದು ಪಿರಿಯಾಪಟ್ಟಣ ಪೊಲೀಸರು ಒಂದು ಮನವಿಯೊಂದಿಗೆ ಎರಡು ದೊಣ್ಣೆಗಳನ್ನು ಹಾಜರು ಮಾಡಿ ಚಾಸಾ–1 ಮತ್ತು 2 ರವರಿಗೆ ಆದ ಗಾಯಗಳ ಬಗ್ಗೆ ಅಭಿಪ್ರಾಯ ವರದಿ ನೀಡುವಂತೆ ಕೇಳಿರುತ್ತಾರೆ. ಸದರಿ ಮು.ಮಾ–2 ಮತ್ತು 3 ರ ದೊಣ್ಣೆಗಳನ್ನು ನಾನು ಪರೀಕ್ಷಿಸಿ ನಿಪಿ–14 ಮತ್ತು 15 ರಲ್ಲಿ ನಮೂದು ಮಾಡಿರುವ ಗಾಯಗಳು ಮು.ಮಾ–2 ಮತ್ತು 3 ರಿಂದ ಹೊಡೆದರೆ ಆಗುವ ಸಾಧ್ಯತೆ ಬಗ್ಗೆ ಅಭಿಪ್ರಾಯ ವರದಿ ನೀಡಿದ್ದೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–19 ಎಂದು ಸಾಕ್ಷಿಯ ಸಹಿಯನ್ನು ನಿಪಿ–19(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪಿರಿಯಾಪಟ್ಟಣ ಪೊಲೀಸರು ಒಂದು ಮನವಿಯೊಂದಿಗೆ ಒಂದು ಕುಯಗತ್ತಿ/ಮಚ್ಚು ಹಾಜರು ಮಾಡಿ ಚಾಸಾ–3 ರವರಿಗೆ ಆದ ಗಾಯಗಳ ಬಗ್ಗೆ ಅಭಿಪ್ರಾಯ ವರದಿ ನೀಡುವಂತೆ ಕೇಳಿರುತ್ತಾರೆ. ಸದರಿ ಮು.ಮಾ–1 ರ ಕುಯಗತ್ತಿ/ಮಚ್ಚನ್ನು ನಾನು ಪರೀಕ್ಷಿಸಿ ನಿಪಿ–17 ರಲ್ಲಿ ನಮೂದು ಮಾಡಿರುವ ಗಾಯಗಳು ಮು.ಮಾ–1 ರಿಂದ ಹೊಡೆದರೆ ಆಗುವ

ಸಾಧ್ಯತೆ ಬಗ್ಗೆ ಅಭಿಪ್ರಾಯ ವರದಿ ನೀಡಿದ್ದೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ–20 ಎಂದು ಸಾಕ್ಷಿಯ ಸಹಿಯನ್ನು ನಿಪಿ–20(ಎ) ಎಂದು ಗುರುತಿಸಲಾಯಿತು.

ಸದರಿ ದೊಣ್ಣೆಗಳನ್ನು ಮತ್ತು ಕುಯಗತ್ತಿಯನ್ನು ಮರುಪ್ಯಾಕ್ ಮಾಡಿ, ವಾಪಸ್ಸು ಕಳುಹಿಸಿರುತ್ತೇನೆ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಎಸಿ ಪಿ ವಕೀಲರಿಂದಃ–**

ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ರೂ. 5,000/– ವೆಚ್ಚದ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.